ಸಂಭಾಳಿಸುವಷ್ಟಾಗಲಿ, ಬೀದಿಗಿಳಿದಾಗ ಆಟೊ, ಓಲೊ, ಊಬರಿತ್ಯಾದಿ ಮಂದಿಯೆದುರು... ಮತ್ತು ನೂಕುಗಾಡಿಯ ತರಕಾರಿಯವರೊಡನೆ... ವ್ಯವಹರಿಸುವಷ್ಟಾಗಲಿ 'ಕನ್ನಡ' ಇಬ್ಬರಿಗೂ ಗೊತ್ತಿಲ್ಲದೇನಿಲ್ಲ.

ಇಷ್ಟಿದ್ದೂ, ರುದ್ರನೀಲ ಥಾಪಸೆಗೆ, ಮುಂದೆದುರಿಸಲಿಕ್ಕಿರುವ ಬದುಕು ಕುರಿತಾಗಿ ಕಾಳಜಿಯಿಲ್ಲವಂತೇನಿಲ್ಲ. ನಡುವಯಸ್ಸು ದಾಟಿದ್ದೇ ಆಯಸ್ಸಿನದೇ ದ್ವಂದ್ವವೆನ್ನಬಹುದಾದ ಎಡವಟ್ಟಿನ ಬಿಕ್ಕಟ್ಟು ಯಾರನ್ನು ತಾನೇ ಕಾಡುವುದಿಲ್ಲ?! ಹೆಂಡತಿಯೆಂಬ ಹೆಂಡತಿ 'ಭೋಟೂನೀಲ್' ಎಂದು ಕರೆಯುವ ಇಂದ್ರನೀಲನನ್ನು, ಇತ್ತಿತ್ತಲಾಗಿ, ರುದ್ರನೀಲ ಥಾಪಸೆ ಬಹಳ ಬಹಳ ಮಿಸ್ ಮಾಡುವುದಿದೆ. ಬಹಿರ್‍ರೂಪದಲ್ಲಿ ತನ್ನದೇ ನಕಲಿನಂತಿರುವ ಮಗನೊಳಕ್ಕೆ ಆಂತರ್ಯದೊಳಕ್ಕೂ ತನ್ನದೇ ತಂತುವನ್ನೆರೆದು ಒಪ್ಪವಾಗಿಸುವಲ್ಲಿ ಸೋತುಹೋದೆನೆ ಅಂತೆಂಬುದು ಚಿಂತೆಯಂತಲ್ಲವಾಗಿಯಾದರೂ, ಕಂತಿನ ವಿಚಾರವೆಂಬಂತೆ ಅವನನ್ನು ಆಗೀಗ ಕಾಡುವುದಿದೆ. ಎಂತಲೇ, ಅವನು ಈಚೀಚೆಗೆ, ಒಬ್ಬನಿದ್ದೂ ಒಳಗಿನಿಂದ ನೆಮ್ಮದಿ ಕಂಡುಕೊಳ್ಳುವ ಏಕಾಂತದ ಬಗ್ಗೆ ಏಕಾಂಗಿತನದ ಬಗ್ಗೆ ಆಗಾಗ, ಚಿಂತನೆ ನಡೆಸಿದ್ದಾನೆ. ಗಂಡಹೆಂಡಿರಿಬ್ಬರೂ ಒಂದೇ ಸಮಯಕ್ಕೆ, ಏಕತ್ರವೆಂಬಂತೆ, ಇಹ ಕಡಿದ ಅಂತರಿಕ್ಷದಲ್ಲಿ ನಕ್ಷತ್ರವಾಗಿ ಮಿನುಗುವ ಸಾಧ್ಯತೆಯೇನು ತಮ್ಮ ಕೈಲಿದೆಯೆ? ಇಬ್ಬರಲ್ಲೊಬ್ಬರು ಮುಂದೆ ಸಾಗಿ, ಇನ್ನೊಬ್ಬರು ಹಿಂದುಳಿಯುವುದಿದ್ದೇ ಇದೆಯಷ್ಟೆ?... ಅಕಸ್ಮಾತ್, ರೇಣುವಿಗೂ ಬಳಿಕ ತಾನು ಏಕಾಕಿಯಾಗಿ, ಈ ಮರ್ತ್ಯದಲ್ಲಿ ಮಿಕ್ಕುಹೋದರೆ ಏನು ಮಾಡುವುದೆಂಬ ದಿಗಿಲು ರುದ್ರನೀಲ ಥಾಪಸೆಗಿದ್ದೇ ಇದೆ. ಬರೋಬ್ಬರಿ ಹದಿನೈದು ವರ್ಷಗಳ ಹಿಂದೆ, ಐವತ್ತರ ಹೊಸ್ತಿಲಲ್ಲಿ, ಇದ್ದಕ್ಕಿದ್ದಂತೆ ಬಲಗಣ್ಣಿನ ದೃಷ್ಟಿಯಲ್ಲೇಕೋ ಐಬು ಕಂಡುಬಂದು, ತಪಾಸಣೆ ನಡೆಸಲಾಗಿ ಮಿದುಳೊಳಗೊಂದು ಗಂಟಿದೆಯೆಂದೂ, ಅದು ತನ್ನದಿಬದಿಯ ಕಣ್ಣರವನ್ನೊತ್ತರಿಸಿದ ಮೇರೆಗೆ ನೋಟ ಕುಂದುತ್ತಿದೆಯೆಂದೂ, ವೈದ್ಯರ ತೀರ್ಪು ಬಂದು, ಹೆಸರಾಂತ ಆಸ್ಪತ್ರೆಯಲ್ಲಿ ಆರು ತಾಸುದ್ದದ ತಲೆಬುರುಡೆಯನ್ನೊಡೆದು ಮುಚ್ಚಳದ ಹಾಗೆ ತೆರೆಸಿಕೊಂಡು, ಕತ್ತರಿಯಿಕ್ಕಿಸಿ ಚಿಕಿತ್ಸೆಗೊಳಗಾಗಿ ಗೆದ್ದು ಬಂದವನಿಗೆ ಈಗೀಗ, ಸಂಜೆಯಾದರೆ ಸಾಕು, ಬಲಗಣ್ಣು ಮಂಜಾಗಿ ತೋರಿಬರುತ್ತದೆ. ಇಷ್ಟಪಟ್ಟುಕೊಂಡು ಸಿನಿಮಾಕ್ಕೆ ಹೋದರೆ, ಉದ್ದಾನುದ್ದದಗಲದ ತೆರೆಯಲ್ಲಿ ಎಡದ್ದು ಮಾತ್ರ ನಿಚ್ಚಳಿಸಿ ಕಂಡು ಬಲಗಡೆಯ ಕಾಣ್ಕೆ ಮಂಪರಿಸಿ ತೋರುವ ಪರಿಯನ್ನು, ಅವನು ಈವರೆಗೆ ಹೆಂಡತಿಯಲ್ಲಿ ಹೇಳಿಕೊಂಡಿಲ್ಲ... ಕೇಳಿದ್ದೇ ಎಲ್ಲಿ ಹೌಹಾರುತ್ತಾಳೋ ಅಂತೆಂಬ ದಿಗಿಲಿನ ಸಲುವಾಗಿ. ಅಲ್ಲದೆ, ವಿಷಯವೆಲ್ಲಿ ಮಗನವರೆಗೂ ತಲುಪಿ ಅವನು ಒತ್ತಾಯಿಸಿ, ತನ್ನನ್ನೆಲ್ಲಿ ಅಮೆರಿಕೆಯ ಸುಪರ್ದಿಗೊಳಪಡಿಸಿಯಾನೋ... ಎಂಬ ಕಳವಳದ ಮೇರೆಗೆ! ಸದರಿ ಸಂಗತಿಯಾದರೂ, ರುದ್ರನೀಲ ಥಾಪಸೆಯನ್ನು ಒಬ್ಬನಿರುವಾಗಲೆಲ್ಲ, ಒಳಗೊಳಗೇ ಒದ್ದೊದ್ದುಕೊಂಡೆದ್ದು ಬಂದು ಅಪ್ಪಳಿಸುತ್ತದೆ. ಕಡಲುಮ್ಮಳಿಸುವ ಹಾಗೆ ಅವನೊಳಮನಸ್ಸು, ಒಂದೇ ಸಮ, ಲೋಲಿಸಲ್ಲೋಲಿಸಿ ಕುಪ್ಪಳಿಸುತ್ತದೆ. ದೇವರೇ... ಇದೆಂತಹ ಅಶಾಂತಿ?! ಯಾತರ ಸಲುವಾಗಿ? ಇನ್ನೆಷ್ಟು ಕಾಲ? ಇಷ್ಟು ದಿವಸದ ಹಗಲು ಕಾಯ್ದು ಚೆನ್ನಾಗಿರಿಸಿದ ಕರ್ತಾರಿಕೆಯು ಇಳಿಸಂಜೆಯನ್ನು ಕತ್ತಲ ಗೋಜಿಗೊಳಪಡಿಸಿಬಿಟ್ಟರೆ... ಅಂತೆಲ್ಲ ಯೋಚಿಸುತ್ತಾನೆ, ಯೋಚಿಸಿ ಲೋಲಿಸುತ್ತಾನೆ. ಲೋಲಿಸಿ ಸಂದಿಗ್ಧಿಸಿದ್ದಾನೆ.

ಈ ಎಲ್ಲದರ ನಡುವೆ, ರುದ್ರನೀಲ ಥಾಪಸೆಗೆ, ಭ್ರಮೆ ಮತ್ತು ವಾಸ್ತವಗಳ ನಡುವಿನ ಸರಿಯಾದ ವ್ಯತ್ಯಯವೇ ಗೊತ್ತಾಗುತ್ತಿಲ್ಲ. ಎಂತಲೇ, ಭ್ರಮನಿರಸನವೆಂಬ ವಿಭ್ರಮಿತ ಪರಿಯೂ